# ನೇಸರು

## ತಿಂಗಳೋಲೆ

₹ 5/-

PAGES 20

MAY 2026 | Nesaru Tingalole | Vol. XLIV - 05

100 Years

## ಮೈಸೂರು ಅಸೋಸಿಯೇಷನ್ನಿನ ಶತಮಾನೋತ್ಸವದ ವರ್ಷ

## Mysore Association's Centenary Year (1926-2026)

100 Years



# ಶತಮಾನೋತ್ಸವದ ವಿಶೇಷ ಸಂಚಿಕೆ

ಮೈಸೂರು ಅಸೋಸಿಯೇಷನ್ ಮುಂಬೈ

**THE MYSORE ASSOCIATION, BOMBAY**

393, Bhau Daji Road, Matunga, Mumbai - 400 019. | Tel.: 2403 7065

Email : mysoreassociation.mumbai@gmail.com

**ನೇಸರು ತಿಂಗಳೋಲೆ**

**ಸಂಪುಟ 44** **ಮೇ 2026** **ಸಂಚಿಕೆ 05**



ಗೌ. ಸಂಪಾದಕರು

**ಡಾ. ಜ್ಯೋತಿ ಸತೀಶ್**

❖ ❖❖

ಸಂಪಾದಕ ಮಂಡಳಿ:

**ಡಾ. ಮಂಜುನಾಥ್**

**ಕೆ. ಮಂಜುನಾಥಯ್ಯ**

**ಕೆ. ಕಮಲ**

**ನಾರಾಯಣ ನವಿಲೇಕರ್**

**ಗಣಪತಿ ಶಂಕರಲಿಂಗ**

❖ ❖ ❖

ನೇಸರುವಿನಲ್ಲಿ ಪ್ರಕಟವಾಗುವ ಬರಹಗಳಿಗೆ ಆಯಾ ಲೇಖಕರೇಜವಾಬ್ದಾರರು. ಅಲ್ಲಿ ಮೂಡಿ ಬಂದ ಅಭಿಪ್ರಾಯಗಳಿಗೆ ಸಂಸ್ಥೆಯು ಜವಾಬ್ದಾರಿಯಲ್ಲ.

– ಸಂ.

The views expressed by the contributors in this journal are theirs and not of the Association and the Association is not in anyway responsible for the same.

- Ed.

❖ ❖ ❖



ಸಂಪರ್ಕ ವಿಳಾಸ:

**ನೇಸರು**

ಮೈಸೂರು ಅಸೋಸಿಯೇಷನ್

393, ಭಾವುದಾಜಿರಸ್ತೆ, ಮಾಟುಂಗ

ಮುಂಬಯಿ – 400 019.

✆ 24037065

Email:

mysoreassociation.mumbai@gmail.com

Website:

www.mysoreassociation.in


ನೂರರ ಸಂಪಾದಕೀಯ



**ಡಾ. ಜ್ಯೋತಿ ಸತೀಶ್**

ಕನ್ನಡದ ಗರಿಮೆ – ಹಿರಿಮೆ ಬಹಳ ಹಿಂದಿನ ಕಾಲದ್ದು. ಕದಂಬರ ಆಳ್ವಿಕೆಯಲ್ಲಿ ಮುಂಬಯಿ ಆಗ ಸೇರಿತ್ತು. ಆದರೆ ಅದು ಕೇವಲ ಏಳು ದ್ವೀಪಗಳ ಸಾಲಾಗಿತ್ತು.

ಟೀಪೂ ಸುಲ್ತಾನ ನನ್ನು ಸೋಲಿಸಿದ ಮೇಲೆ ಕನ್ನಡ ನಾಡಿನ ಹಲವು ಪ್ರಾಂತ್ಯಗಳು ಮರಾಠರ, ನಿಜಾಮರ ಹಿಡಿತಕ್ಕೆ ಸಿಕ್ಕವು ಆದರೆ ಕನ್ನಡ ನಾಡು ಎಲ್ಲಿಯವರೆಗೆ ಇತ್ತೆಂಬುದನ್ನು ಜ್ಞಾನದೇವನೇ ಹೇಳಿದ್ದಾನೆ. ಅವನು ಹೇಳಿದಂತೆ , "ಕಾನಡಾ ವಿಠಲು ತೂ ಕರ್ನಾಟಕೂ"

ಮುಂಬಯಿ ಬ್ರಿಟಿಷರ ಆಳ್ವಿಕೆಗೆ ಸಿಕ್ಕಿ ಉದ್ಯೋಗಗಳು ಹೆಚ್ಚಾದಾಗ, ದಕ್ಷಿಣ ಕನ್ನಡದಿಂದ ಹೆಚ್ಚಿನ ಮಂದಿ ತುಳು – ಕನ್ನಡಿಗರು ಮುಂಬಯಿಗೆ ಬಂದರು. ಇಲ್ಲಿಯೇ ಇದ್ದ ಕನ್ನಡಿಗರಿಗೆ ಕನ್ನಡವೇ ಮರೆತು ಹೋಗುವಷ್ಟು ಮರಾಠಿಗರು ಅವರ ಮೇಲೆ ಪ್ರಭಾವ ಬೀರಿದ್ದರು. ಆಗ ದಿಟವಾಗಿ ಕನ್ನಡ ಉಳಿದಿದ್ದು, ಮೈಸೂರು ಅರಸರ ಪ್ರಾಂತ್ಯದಲ್ಲಿ ಮಾತ್ರ. ಮೊಗವೀರರು ಮತ್ತು ಇತರ ವಲಸೆ ಬಂದ ಇತರ ಕನ್ನಡಿಗರು ತಮ್ಮ ಕೈಲಾದ ಮಟ್ಟಿಗೆ ಮುಂಬಯಿಯಲ್ಲಿ ಕನ್ನಡವನ್ನು ಉಳಿಸುವ ಪ್ರಯತ್ನವನ್ನು ಮಾಡಿದ್ದಾರೆ.

ಮೊದಲನೆಯ ಮಹಾಯುದ್ಧಕ್ಕೆ ಮುಂಚೆಯೇ ಭಾರತರತ್ನ ವಿಶ್ವೇಶ್ವರಯ್ಯನವರು ಮುಂಬಯಿ ಪ್ರಾಂತ್ಯದ ಪ್ರೆಸಿಡೆನ್ಸಿ ಎಂಜಿನಿಯರ್ ಆಗಿ, ಹಲವಾರು ಸುಧಾರಣೆಗಳನ್ನು ಮಾಡಿದ್ದರು. ಅವರ ಹಿಂದೆಯೇ ಅನೇಕ ಮೈಸೂರಿನ ವಿದ್ಯಾವಂತ ಮಂದಿ, ಇಂಜಿನೀಯರ್ ಗಳು, ವಕೀಲರು, ಸಾಹಿತಿಗಳು ಮುಂಬಯಿಗೆ ಬಂದು ನೆಲೆಸಿದ್ದರು. ಅವರಲ್ಲಿ ಹಲವರು ಉದ್ಯೋಗಪತಿಗಳೂ ಆದರು. ಸಾವಿರಾರು ಮಂದಿಗೆ ಕೆಲಸಗಳನ್ನು ನೀಡಿದರು. ಅವರು ತಮ್ಮ ಒಳ್ಳೆಯ ನಡೆವಳಿಕೆಗಳಿಂದ ಹೆಸರುವಾಸಿಯಾದರು. ಇವರು ಮೈಸೂರಿನವರು ಎಂದು ಹೇಳಿಕೊಳ್ಳುವ ಹಿರಿಮೆ ಇವರದ್ದಾಯಿತು.

ಅವರಿಗೆಲ್ಲಾ ಇದ್ದ ಬೇರು ಒಂದೇ, "ಕನ್ನಡ". ಅದನಾಡುವುದೇ ಚೆಂದ ಎಂದು ಅವರೆಲ್ಲಾ ಸೇರಿ ಮಹಾಯುದ್ಧದ ನಂತರ "ಮೈಸೂರು ಅಸೋಸಿಯೇಷನ್" ಎಂದು ತಾವೆಲ್ಲಾ ಒಂದುಗೂಡುವ ಒಂದು ಗೂಡನ್ನು ಕಟ್ಟಿದರು. ಆ ಒಂದು ಕುಡಿ, ಮೊಳಕೆ ಮೊಳೆತು ಹಸಿರಾಗಿ, ಮರವಾಗಿ ಬೆಳೆಯಿತು. ಕಾಲಕಾಲಕ್ಕೆ ಇಂಜಿನಿಯರ್ ಗಳು, ವಕೀಲರನ್ನು ಬಿಟ್ಟು ಸಿನೆಮಾಗ್ರಫಿ, ಅಣುಶಕ್ತಿ ಸಂಶೋಧನೆ, ಐ.ಟಿ.ಯಲ್ಲಿ ಕೆಲಸ ಮಾಡಿ ಪದವಿಗಳಿಗೇರಿದ ಅನೇಕ ಪೀಳಿಗೆಗಳು ಈ ಗೂಡನ್ನು ಒಂದು ಮಾಡಿ ಮುಂಬಯಿಯಂತಹ ಹೊರನಾಡಿನಲ್ಲಿ ತಮ್ಮದೇ ಕುರುಹಾಗಿ, ಕಲೆ ಸಾಹಿತ್ಯ, ವಿದ್ಯಾಭ್ಯಾಸಗಳಿಗೆ ನಿರತ ಸಂಸ್ಥೆಗಳನ್ನು ಕಟ್ಟಿ ಬೆಳೆಸಿದರು. ಆ ಕಲೆಯ ಚಿಗುರು ಇಂದು ಹೆಮ್ಮರವಾಗಿ ನೂರು ವರ್ಷಗಳು ಸಂದಿವೆ. ಅಂದು 1926 ರಲ್ಲಿ ಶ್ರೀ. ಚಂದ್ರಶೇಖರ ಶರ್ಮಾ ಅವರು ಮೊಳಕೆ ಹಾಕಿದ "ಪ್ರಬೋಧಕ" ಇಂದು ಮೇರುವಾಗಿ "ನೇಸರು" ವಿನಂತಹ ಸೂರ್ಯವಾಗಿದೆ.

ನೂರರ ಮೆರುಗು ಎಂದೆಂದೂ ಎಲ್ಲೆಲ್ಲೂ ಹರಡುತಿರಲಿ.

"ಕಾಯೌ ಶ್ರೀ ಗೌರಿ ಕರುಣಾ ಲಹರಿ"

# ನೂರರ ಸಡಗರ – ವಿಜೃಂಭಣೆ

ಅಸೋಸಿಯೇಷನ್ ತನ್ನ ನೂರರ ಹಬ್ಬದಂದು ಒಡನಾಡಿರುವ ಮುಂಬೈಯ ಕನ್ನಡ ಸಂಘಗಳನ್ನೆಲ್ಲ ಆದರದಿಂದ ಬರಮಾಡಿಕೊಂಡು ಅವರನ್ನೆಲ್ಲ ಸನ್ಮಾನಿಸಿ ಕುಣಿದಾಡುವ ಭಾಗ್ಯ ನಮ್ಮದಾಗಿತ್ತು ಕನ್ನಡ ಸಂಘ ಸಂಸ್ಥೆಗಳ ಒಡನಾಟ ಬಹಳ ಸಿಹಿಯಾದದ್ದು. ನಮ್ಮಂತೆ ಅವರು ಕೂಡ ಅದೇ ನೆಂಟಿನ ನಲುವಿನಿಂದ ಭಾನುವಾರ ಏಪ್ರಿಲ್ 19, 2026ರ ಬೆಳಿಗ್ಗೆ 11 ಗಂಟೆಗೆ ಅಸೋಸಿಯೇಷನ್ ಗೆ ಬಂದಿದ್ದರು. ಬಂದವರಿಗೆ ಮೈಸೂರಿನ ಕಾಫಿ, ಮೈಸೂರು ಬೋಂಡ ತಿನ್ನಿಸಿ ಸಭಾಗೃಹದ ಮೆಟ್ಟಿಲು ಹತ್ತಿಸಿದೆವು. 28 ಕನ್ನಡ ಸಂಘ ಸಂಸ್ಥೆಗಳು ನಮ್ಮ ಆದರವನ್ನು ಸ್ವೀಕರಿಸಿದರು ಅವರಲ್ಲಿ

ಮೊಗವೀರ ವ್ಯವಸ್ಥಾಪಕ ಮಂಡಳಿ,
ಬಿ ಎಸ್ ಕೆ ಬಿ ಅಸೋಸಿಯೇಷನ್
ಕನ್ನಡ ಕಲಾ ಕೇಂದ್ರ
ದೇವಾಡಿಗ ಸಂಘ ಮುಂಬೈ
ಬಸವೇಶ್ವರ ಫಿಲಾಸೊಫಿಕಲ್ ಅಂಡ್ ಕಲ್ಚರಲ್ ಸೊಸೈಟಿ
ಚೆಂಬೂರು ಕರ್ನಾಟಕ ಸಂಘ
ಮುಂಬೈಕನ್ನಡ ಸಂಘ
ನವಿ ಮುಂಬೈ ಕನ್ನಡ ಸಂಘ
ಕನ್ನಡ ಸಂಘ ಅಣುಶಕ್ತಿ ಕೇಂದ್ರ
ಕರ್ನಾಟಕ ಸಂಘ ಮುಂಬೈ
ಹವ್ಯಕ ವೆಲ್ಫೇರ್ ಅಸೋಸಿಯೇಷನ್,
ಸೃಜನ ಲೇಖಕಿಯರ ಬಳಗ
ಕನ್ನಡಿಗರ ಕಲಾವಿದ ಪರಿಷತ್ತು ಮಹಾರಾಷ್ಟ್ರ
ಕನ್ನಡ ವಿಭಾಗ ಮುಂಬೈ ವಿಶ್ವವಿದ್ಯಾಲಯ
ಬಾಂಬೆ ಬಂಟ್ಸ್ ಅಸೋಸಿಯೇಷನ್
ವಾಪಿ ಕನ್ನಡ ಸಂಘ
ದೇವಾಡಿಗ ವೆಲ್ಫೇರ್ ಅಸೋಸಿಯೇಷನ್
ಬಿಲ್ಲವರ ಸೇವಾ ಸಂಘ ಕುಂದಾಪುರ
ಕರ್ನಾಟಕ ಸಂಘ ಖಾರ್ಘರ್
ಕರ್ನಾಟಕ ಮಲ್ಲ
ಆರತಿ ಆರ್ಟ್ಸ್ ಪ್ರಿಂಟರ್ಸ್
ಎನ್. ಕೆ. ಇ. ಎಸ್. ವಡಾಲ
ಕನ್ನಡ ಭವನ ಫೋರ್ಟ್
ಚೆಂಬೂರು ಕರ್ನಾಟಕ ಹೈ ಸ್ಕೂಲ್
ಕನ್ನಡ ವನಿತ ಸಮಾಜ
ಚಾರ್ಕೋಪ್ ಕನ್ನಡ ಸಂಘ ಹಾಗೂ ಸಾಫಲ್ಯ ಸೇವಾ ಸಂಘ




ನಮ್ಮ ಅಧ್ಯಕ್ಷರಾದ ಶ್ರೀಮತಿ ಕಮಲಾರವರು ಎಲ್ಲರಿಗೂ ಶಾಲು ಹೊದಿಸಿ ನಮ್ಮ ನೂರರ ನೆನೆಫಲಕವನ್ನು ಇತ್ತು ಸಿಹಿಯಾದ ದ್ರಾಕ್ಷಿ ಗೋಡಂಬಿ ಬಾದಾಮಿಗಳನ್ನು ಕೊಟ್ಟು ಆದರದಿಂದ ಸನ್ಮಾನಿಸಿದ್ದುದ್ದು
ಮರೆಯಲಾಗದ ಒಂದು ನೋಟವಾಗಿತ್ತು. ತುಂಬಿ ಹರಿಯುತ್ತಿದ್ದ ನಮ್ಮ ಸಭಾಗೃಹ ತುಂಬಿದ ನಮ್ಮೆದೆಗಳು ನಮ್ಮ ಕಣ್ಣಲ್ಲಿ ನೀರು ತುಂಬಿ ಬಂದಿತ್ತು.
ಎರಡನೆಯದಾಗಿ ನಮ್ಮ ಅಸೋಸಿಯೇಷನ್‌ನ ಸಂಗೀತಗಾರರೇ ಕನ್ನಡ ಗೀತೆಗಳನ್ನು ಹಾಡಿ ಎಲ್ಲರ ಮನ ತಣಿಸಿದರು. ಮೈಸೂರು ಅಸೋಸಿಯೇಷನ್ ಎಂದರೆ ಕನ್ನಡ ಗೀತೆಗಳು ನಾಟಕಗಳಿಗೆ ಹೆಸರಾದದ್ದು. ಅದರಲ್ಲಿ 6ನೆಯ ಪೀಳಿಗೆಯ ನಮ್ಮ ಎಳೆಯರು ಶ್ರೀಮತಿ ಶ್ಯಾಮಲಾ ರಾಜೇಶ್ ಅವರ ತರಬೇತಿಯಲ್ಲಿ ಹಾಡಿರುವುದು ಶ್ಲಾಘನೀಯವಾಗಿತ್ತು. ಶ್ಯಾಮಲಾ ಅವರ ಸಂಗಡಿಗರಾಗಿ ಶ್ರೀಮತಿ ರಾಜೇಶ್ವರಿ ಗೋಪಾಲಕೃಷ್ಣ, ಶ್ರೀಮತಿ ಗೌರಿ, ಶ್ರೀಮತಿ ಪೂರ್ಣಿಮಾ, ಶ್ರೀಮತಿ ನಳಿನಾ ಪ್ರಸಾದ್, ಕುಮಾರಿ ಮಹತಿ ರಾಧೇಶ್, ಕುಮಾರ್ ಸುಶಾಂತ್, ಶ್ರೀ ಆರ್. ಎಸ್. ರಂಗನಾಥ, ಶ್ರೀ ಪದ್ಮನಾಭ ಸಿದ್ಧಕಟ್ಟೆ ಅವರು ತಮ್ಮ ದನಿಯನ್ನು ಕೂಡಿಸಿದ್ದರು. ಅವರು ಹಾಡಿದ ಈ ಹಾಡುಗಳಲ್ಲಿ ಜಯ ಜಯ ಗೌರಿ, ಹತ್ತಿತು ಹೊತ್ತಿತು ಕನ್ನಡದ ದೀಪ, ಎಲ್ಲೋ ಎನೋ ಕಾಲ್ಗೆಜ್ಜೆಯ ನಾದ, ಇರಬೇಕು ಇರಬೇಕು ತೊರೆದು ಸಾವಿರ ಚಿಂತೆ ಹಾಗೂ ನಿಸಾರ್ ಅಹಮದ್ ಅವರ ನಿತ್ಯೋತ್ಸವ ತಾಯಿ ನಿತ್ಯೋತ್ಸವ ಎಲ್ಲರ ಮನ ಗೆದ್ದಿತು. ಕನ್ನಡ ಗೀತೆಗಳ ನಂತರ ನಮ್ಮ ಸಂಜೀವ ಕಾಂಚನ್, ರಂಜಿತ್, ಸುರೇಶ್ ಅಣಿ ಮಾಡಿಟ್ಟ ಸವಿಯೂಟ ಸವಿದು ಬಾಯಿ ಚಪ್ಪರಿಸಿದರು.
ಬೆಂಗಳೂರಿನಿಂದ 80ರ ದಶಕದ ಸದಸ್ಯರು ತಾವಿಲ್ಲಿ ಸವಿದ ರಂಗಾನುಭವವನ್ನು ಮತ್ತೆ ಮತ್ತೆ ನೆನೆಸಿಕೊಂಡು ತಯಾರಿಯಾಗಿ ಬಂದಿದ್ದರು. ಅವುಗಳಲ್ಲೆಲ್ಲಾ ಅಂದಿನ ಸಂಗೀತ ಕೂಡಿದ ನಾಟಕಗಳನ್ನು ನೆನೆದು ಮತ್ತೆ ಅವುಗಳನ್ನು ಹಣೆದು ನಮ್ಮ ಮುಂದೆ ಆಡಿದರು.
"ಇನ್ನೆಲ್ಲಿ ನೋಡಲಿಂಥ ಮುತ್ತು ರತ್ನದ ತೇರು"
"ನಂಗೆಣಿಯ ಚೆಂದಪ್ಪ ಮಲ್ಲಿಗೆಯ ದಳದ್ಹಾಂಗೆ ನಡೆವಾಗ"
"ಅವ್ವ ನಿನ್ನ ಮೊಗ ಚೆಂದ"

ಇಂತಹುದನ್ನೆಲ್ಲಾ ಅಭಿನಯದೊಂದಿಗೆ ಆಡಿ ತೋರಿಸಿದರು. ಬೇಂದ್ರೆಯವರ ಜಾತ್ರೆಯ ನೋಟ ಮರೆಯಲಾಗದ್ದು. ಆ ತಂಡದಲ್ಲಿ ಎಷ್ಟೋ ಮಂದಿ ಅರವತ್ತರ ಇನ್ನೊಂದು ಬದಿಯಲ್ಲಿ ನಿಂತಿರುವವರು. ಅವರ ಉತ್ಸಾಹ ನೋಡಿದರೆ ಇಂದಿನವರಿಗೂ ರೋಮಾಂಚನವಾಗುವಂತಹದು.

ಶ್ರೀಮತಿ ರಮಾ ವೆಂಕಟೇಶ್ ಅವರ ಮುಖಂಡತ್ವದಲ್ಲಿ ಶ್ರೀಮತಿಯರಾದ ಶಾರ್ವರಿ ಜಯರಾಂ, ರಾಜೇಶ್ವರಿ ಗೋಪಾಲಕೃಷ್ಣ, ಗೌರಿ, ಪೂರ್ಣಿಮಾ, ಪ್ರತಿಮಾ ರಾವ್, ಸುಧಾ ರವಿಶಂಕರ್, ಜಯಶ್ರೀ ದೇಸಾಯಿ, ಪುಷ್ಪಾ ರಘುನಾಥ್ ರಾವ್, ಶ್ರೀ ರವಿಶಂಕರ್, ಶ್ರೀ ಅಮೃತ ದೇಸಾಯಿ, ಶ್ರೀ ಗುರುದತ್ತ್ ರಾವ್, ಶ್ರೀ ಆರ್. ಎಸ್. ರಂಗನಾಥ

ಮತ್ತು ಮಕ್ಕಳು ಸೇರಿ ಹಾಡಿ ಕುಣಿದರು. ಶ್ರೀ ಸುಧೀಂದ್ರ ಅವರ ಬೆಳಕು.

ಅಸೋಸಿಯೇಷನ್ ತನ್ನ ನೂರು ವರ್ಷಗಳ ಕಾಲದಲ್ಲಿ ಅನೇಕ ಹಿರಿಯ ಸದಸ್ಯರ ಸೇವೆ ಪಡೆದಿದೆ. ಅವರ ದುಡಿಮೆಯೇ ಇಂದಿನ ಅಸೋಸಿಯೇಷನ್ನಿನ ಏಳಿಗೆಗೆ ಕಾರಣವಾಗಿದೆ. ಆ ಹಿರಿಯರಲ್ಲಿ ಎಷ್ಟೋ ಮಂದಿ ಇಂದು ನಮ್ಮೊಡನಿಲ್ಲ ಎನ್ನುವುದು ನಮಗೆ ದುಃಖದ ಮಾತು. ಅವರುಗಳು ಇದ್ದಿದ್ದರೆ ನಾವೆಷ್ಟು ಅವರೊಡನೆ ಕುಣಿದಾಡಬಹುದಿತ್ತು! ಆದರೆ ಅದರಲ್ಲಿ ಇಂದು ಕೆಲವು ಮಂದಿ ಇದ್ದಾರೆ. ಬಂದಿದ್ದರು. ಅವರಿಲ್ಲದಿದ್ದರೂ ಕೂಡ ಅವರ ಕುಟುಂಬದವರು ಇಂದು ನಮ್ಮೊಡನಿದ್ದಾರೆ. ಅವರೆಲ್ಲರನ್ನೂ ಆದರದಿಂದ ಬರು ಮಾಡಿಕೊಂಡು ಅವರನ್ನು ಸನ್ಮಾನಿಸಲಾಯಿತು.

ನಮ್ಮ ಹಿರಿಯ ಆಟಚತುರ ಶ್ರೀ ಸೀತಾರಾಂ ಹಾಗೂ ಶ್ರೀಮತಿ ಲಕ್ಷ್ಮೀ ಸೀತಾರಾಂ

ಶ್ರೀಮತಿ ಸುಶೀಲಾ ರಾಮಣ್ಣ

ಡಾ. ಎ. ಎನ್. ಪ್ರಸಾದ್

ಶ್ರೀಮತಿ ರಮಾ ವಸಂತ್

ಶ್ರೀಮತಿ ಅನಸೂಯಾ ಐಯ್ಯಂಗಾರ್

ಶ್ರೀಮತಿ ಯದು ಕೀರ್ತಿ

ಶ್ರೀ. ನಾರಾಯಣ ಜಾಗೀರದಾರ್

ಶ್ರೀ. ಎನ್. ವೆಂಕಟೇಶ್

ಡಾ ವೈ. ಡಿ. ವೆಂಕಟೇಶ್

ಶ್ರೀ. ಆರ್. ಎಸ್. ರಂಗನಾಥ

ಡಾ. ಉಷಾ ದೇಸಾಯಿ

ಶ್ರೀ. ಜಯಂತ್ ರಾಂಪ್ರಸಾದ್

ಶ್ರೀ. ಸಿ. ಎಸ್. ದಿನೇಶ್



ಇವರಲ್ಲದೆ ನಮ್ಮ ಸಂಸ್ಥೆಗಾಗಿ ಈಗಲೂ ದುಡಿಯುತ್ತಿರುವ ಸಂಸ್ಥೆಯ ಏಳಿಗೆಯನ್ನು ಬಯಸುವ ಈ ಕೆಳಗಿನವರನ್ನು ಕೂಡ ಸನ್ಮಾನಿಸಲಾಯಿತು.

ಡಾ. ಜ್ಯೋತಿ ಸತೀಶ್

ಶ್ರೀ. ರೋನ್ಸ್ ಬಂಟ್ವಾಳ್

ಶ್ರಿ. ಜಯ ಸಾಲ್ಯಾನ್

ಶ್ರೀ. ಸುರೇಂದ್ರಕುಮಾರ್ ಮಾರ್ನಾಡ್

ಚಪ್ಪಾಳೆಗಳ ಸುರಿಮಳೆಗಳ ನಡುವೆ, ಹಿರಿಯರಿಗೆ ಶಾಲು ಹೊದಿಸಿ, ಫಲಕ ಕೊಟ್ಟು, ಹಣ್ಣುಗಳನ್ನು ಇತ್ತು ನಾವು ಹಿಗ್ಗಿದ್ದೀವಿ.

ಇದಾದ ಮೇಲೆ ನಗುವಿನ ಒಂದು ತೋಟವೇ ನಮ್ಮ ಮುಂದೆ ಅರಳಿ ಬಂತು.

ಕನ್ನಡದಲ್ಲಿ ಹಾಸ್ಯವನ್ನು ಹಸಿರಾಗಿ ತೋರುವ ಕೆಲವೇ ಕೆಲವು ರಂಗಕರ್ಮಿಗಳಲ್ಲಿ ಶ್ರೀ. ರಾಘವೇಂದ್ರ ಆಚಾರ್ಯ ಅವರು ಹೆಸರು ಮಾಡಿದ್ದಾರೆ. ಅವರು ನಮ್ಮ ರಂಗವನ್ನು ಹತ್ತಿ, ನೆರೆದವರನ್ನೆಲ್ಲಾ ನಕ್ಕು ನಗಿಸಿ ಕುಣಿಸಿದರು. ಅವರು ಒಂದೊಂದು ಮಾತು ನಗುವಿನ ಮುತ್ತುಗಳು. ಅ ವರು ಹೊಟ್ಟೆತುಂಬಾ ಪಕ್ಕೆ ಹಿಡಿಯುವವರೆಗೂ ಕುಣಿಸಿದ ಮೇಲೆ, ಕಾರ್ಯದರ್ಶಿಗಳು ಬಂದು, "ಸಧ್ಯ, ತಾವೆಲ್ಲಾ ಮೇಲೇರಿ ಕಾಫಿ ತಿಂಡಿ ತೆಗೆದುಕೊಂಡು ಬನ್ನಿ ನಾವು ನಮ್ಮೊಡನೆ ಶ್ರೇಷ್ಠ ವಿಜ್ಞಾನಿಗಳನ್ನು ಸ್ವಾಗತಿಸೋಣ" ಎಂದರು.

ಮೇಲೆ ಹತ್ತಿದರೆ ಅಲ್ಲಿ ಮತ್ತೆ ಸಂಜೀವ ಖಾರದ ತಿಂಡಿ, ಸಿಹಿ ತಿಂಡಿ, ತಿನ್ನಿಸಿಯೇ ಆಮೆಲೆ ಕಾಫಿ ಇತ್ತ. ಮೈಸೂರು ಅಸೋಸಿಯೇಷನ್ ನ ಕಾಫಿ ಎಂದರೆ ಅದೇನು ಸಾಮಾನ್ಯವೇ!!!

ಕಾಫಿಯನ್ನು ಸವಿಯುವುದರ ಜೊತೆಗೆ, ಸಂಗಡಿಗರೊಡನೆ ಮಾತನಾಡುವುದೇ ಒಂದು ಚೆಂದ.

ಎಲ್ಲರೂ ಕೆಳಗೆ ಇಳಿದು ಬಂದಾಗ ಮತ್ತೆ ತೆರೆ ತೆರೆಯಿತು. ಅಸೋಸಿಯೇಷನ್ನಿನ ಅಧ್ಯಕ್ಷರು, ಶ್ರೀಮತಿ ಕಮಲಾ ಅವರು ಮುಖ್ಯ ಅತಿಥಿಗಳಾದ ಮುಂಬೈ ವಿಶ್ವವಿದ್ಯಾಲಯದ ಉಪಕುಲಪತಿ ಪ್ರಾ. ರವೀಂದ್ರ ಕುಲಕರ್ಣಿ ಅವರನ್ನು ಹಾಗೂ ವಿಶೇಷ ಆಹ್ವಾನಿತರಾದ ಐಐಟಿ ಬಾಂಬೆಯ ಉಪನಿರ್ದೇಶಕ ಪ್ರಾ. ರವೀಂದ್ರ ಗುಡಿಯವರನ್ನು ರಂಗದ ಮೇಲೆ ಆಹ್ವಾನಿಸಿ, ಕನ್ನಡದ ಬೆಳಗನ್ನು ದೀಪ ಹಚ್ಚಿ ಬೆಳಗಿಸಿದರು. ಸಥಾಯೆ ಕಾಲೇಜಿನ ಪ್ರಾಂಶುಪಾಲರು ಮತ್ತು ಸಂಪುಟದ ಮುಖ್ಯ

ಸಂಪಾದಕರಾದ ಪ್ರೊ. ಎಂ. ಆರ್. ರಾಜವಾಡೆ ಅವರೂ ಕೂಡ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಕುಮಾರಿಯರಾದ ಅನಿಕಾ ಹಾಗೂ ಆರೋಹಿ ಪ್ರಾರ್ಥನೆಯನ್ನು ಚೆನ್ನಾಗಿ ಹಾಡಿದರು. ಆಮೇಲೆ ಶ್ರೀ. ನಾರಾಯಣ ನವಿಲೇಕರ್ ಅವರು ಮುಂಬಯಿ ವಿಶ್ವವಿದ್ಯಾಲಯದ ಉಪಕುಲಪತಿಗಳಾದ ಪ್ರಾ. ರವೀಂದ್ರ ಕುಲಕರ್ಣಿಯವರ ಪರಿಚಯ ಮಾಡಿದರು. ವಿಜ್ಞಾನಿಗಳಾಗಿ ಹಲವು ದಶಕಗಳ ಕಾಲ ಸಂಶೋಧನೆಯನ್ನು ನಡೆಸಿ, ಈಗ ಮುಂಬಯಿ ವಿಶ್ವವಿದ್ಯಾಲಯದ ಕುಲಪತಿಗಳಾಗಿ ಕಾರ್ಯನಿರ್ವಹಣೆ ಮಾಡುತ್ತಿದ್ದಾರೆ. ಆದರೆ ಇವರು ಭಾರತದ ಆಳವಾದ ಬೌದ್ಧಿಕ ವೈಜ್ಞಾನಿಕ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಭಾರತದ 22 ಭಾಷೆಗಳಲ್ಲಿ ಶಿಕ್ಷಣವನ್ನು ನೀಡಲು ಮುಂದುವರೆಯುತ್ತಿದ್ದಾರೆ. ಈಗ ಕನ್ನಡದಲ್ಲಿ ಮೈಸೂರು ಅಸೋಸಿಯೇಷನ್ ಶತಮಾನೋತ್ಸವದ ಸಮಯದಲ್ಲಿ, ಮುಂಬೈ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥ ಪ್ರಾ. ಗಣೇಶ ಉಪಾಧ್ಯರ ಮುಂದಾಳುತನದಲ್ಲಿ ಕನ್ನಡದ ಪಠ್ಯಕ್ರಮವನ್ನು ತಂದಿದ್ದಾರೆ.

ಶ್ರೀಮತಿ ಕಮಲಾ ಅವರು ಪ್ರಾ. ರವೀಂದ್ರ ಕುಲಕರ್ಣಿಯವರನ್ನು ಸನ್ಮಾನಿಸಿಸರು. ಅನಂತರ ಮುಂಬೈ ಐಐಟಿಯ ಉಪನಿರ್ದೇಶಕರಾದ ಪ್ರಾ. ರವೀಂದ್ರ ಗುಡಿಯವರ ಪರಿಚಯ ಮಾಡಿಕೊಟ್ಟರು. ಈ ಶತಮಾನೋತ್ಸವದ ಕಾಲದಲ್ಲಿ ನಮ್ಮೊಡನೆ ಇರುವುದು ನಮ್ಮ ಭಾಗ್ಯ ಎಂದರು. ಪ್ರಾ. ಗಣೇಶ ಉಪಾಧ್ಯರು ಮಾತನಾಡಿ, ಭಾರತೀಯ ಜ್ಞಾನ ಪರಂಪರೆಯನ್ನು ವಿಸ್ತಾರವಾಗಿ ವಿವರಿಸಿದರು. ಅಂತೆಯೇ ಕುಲಪತಿಗಳ ಬೆಂಬಲದಿಂದ ತಾವು ಈ ಕಾರ್ಯಸಿದ್ಧಿಯಲ್ಲಿ ಗೆಲುವನ್ನು ಪಡೆದವು ಎಂದರು.

ಮುಂದೆ ಪ್ರಾ. ಗುಡಿಯವರು ಮಾತನಾಡಿ ಹೇಗೆ ತಾಂತ್ರಿಕ ಜ್ಞಾನ ಭಾರತದ ಬೇರಿನಲ್ಲಿಯೇ ಅಡಗಿದೆ. ಅದೀಗ ಪಾಶ್ಚಾತ್ಯ ವಿಜ್ಞಾನಕ್ಕೆ ಹಲವಾರು ಕೊಡುಗೆಗಳನ್ನು ಕೊಟ್ಟಿದೆ. ಭಾಷೆ ಹಲವಾದರೂ ಭಾರತದಲ್ಲಿ ಮನೋಜ್ಞಾನ ಒಂದೇ ಆಗಿದೆ ಎಂದರು.

ಪ್ರಾ. ಕುಲಕರ್ಣಿಯವರು ಹೇಗೆ  ತಮ್ಮ ಸುಮಾರು ಕಾಲು ಶತಮಾನದ ವೈಜ್ಞಾನಿಕ ಅನುಭವದಲ್ಲಿ, ಭಾರತದ ಜ್ಞಾನ ಹೇಗೆ ಗಟ್ಟಿಯಾಗಿ ಹುದುಗಿದೆ. ಇದನ್ನು ನಾವುಗಳು ಮುಂದಿನ ಪೀಳಿಗೆಗಳಿಗೆ ಹೇಗೆ ತಲುಪಿಸಿ, ಬೆಳವಣಿಗೆಯಾಗುವಂತೆ ಮಾಡಬಹುದು, ಎಂಬುದು ನಮಗೀಗ ಮುಖ್ಯ. ತಾವು ಮಾಡುತ್ತಿರುವ ಕಾರ್ಯದಲ್ಲಿ ಮೈಸೂರು ಅಸೋಸಿಯೇಷನ್ ಹೇಗೆ ಸಹಾಯ ಮಾಡಬಹುದೇ ಎಂದು ಕೇಳಿದ ಮರುಗಳಿಗೆ ಯಲ್ಲಿಯೇ ಮೈಸೂರು ಅಸೋಸಿಯೇಷನ್ ನ ಕಾರ್ಯದರರ್ಶಿಗಳಾದ ಪ್ರಾ. ಗಣಪತಿ ಶಂಕರಲಿಂಗ ಅವರು ತಮ್ಮ ಒಪ್ಪಿಗೆಯನ್ನು ನೀಡಿ ಮುಂದಾದರು ಎನ್ನುವುದನ್ನೂ ಹೇಳಿದರು.

ಕಡೆಗೆ ಶ್ರೀಮತಿ ಕಮಲಾ ಅವರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಎಲ್ಲಾ ಕನ್ನಡ ಸಂಘಗಳ ಪರವಾಗಿ ಮುಂಬೈ ವಿಶ್ವವಿದ್ಯಾಲಯದ ಈ ಕಾರ್ಯದಲ್ಲಿ ತನ್ನನ್ನು ಒಡಗೂಡಿಸಿಕೊಂಡಿದೆ. ಶತಮಾನಗಳಲ್ಲಿ ಒಂದು ಇಂತಹ ಭಾಗ್ಯ ನಮಗೆ ದೊರಕಬಹುದು. ಅದಕ್ಕಾಗಿ ಕುಲಪತಿಗಳಿಗೆ ನಾವು ಋಣಿಯಾಗಿದ್ದೇವೆ ಎಂದರು.

ಶ್ರೀಮತಿಯರಾದ ಅಹಲ್ಯಾ ಬಲ್ಲಾಳ್, ನಳಿನಾ ಪ್ರಸಾದ್, ಕಲಾ ಭಾಗ್ವತ್ ಮತ್ತು ರೇಷ್ಮಾ ಶಂಕರಲಿಂಗ ಅವರು ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಿರೂಪಿಸಿದರು.

ಶ್ರೀ ನಾರಾಯಣ ನವಿಲೇಕರ್ ಅವರು ಎಲ್ಲರಿಗೂ ವಂದನೆಗಳನ್ನು ಸಲ್ಲಿಸಿದರು.

ಆಮೇಲೆ ಕುಮಾರಿ ಸಾಧ್ವಿನಿ ಕೊಪ್ಪ ಅವರ ತಂಡ ರಂಗದ ಮೇಲೆ ಬಂದು, ಕನ್ನಡ ಗೀತೆಗಳನ್ನು ಹಾಡಿ ಎಲ್ಲರ ಮನ ತಣಿಸಿದರು.

ಕಡೆಯ ಹಾಗೂ ಮರೆಯಲಾಗದ ಶತಮಾನೋತ್ಸವದ ಕೊನೆಯ ಹೆಜ್ಜೆಯಾಗಿ ಸಂಜೀವ ಕಾಂಚನ್ ಮಾಡಿಬಡಿಸಿದ ಅಡುಗೆ ಸವಿಯೂಟ ಎಲ್ಲರೂ ಬಾಯಿ ಚಪ್ಪರಿಸುವಂತೆ ಮಾಡಿತು.

ಅಂತೆಯೇ ಶತಮಾನೋತ್ಸವ ಎಂದೆಂದೂ ಮರೆಯಲಾಗದ ಒಂದು ವಿಜೃಂಭಣೆಯ ದಿನವಾಯಿತು.

ಜೈ ಕನ್ನಡ ಮಾತೆ.



ಶ್ರೀಮತಿ ಅಹಲ್ಯಾ ಬಲ್ಲಾಳ್ ಅತಿಥಿಗಳನ್ನು ಸ್ವಾಗತಿಸುತ್ತಾ, ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.



ಶ್ರೀಮತಿ ಶ್ಯಾಮಲಾ ರಾಧೇಶ್ ಹಾಗೂ ಮಹತಿ ರಾಧೇಶ್ ಪ್ರಾರ್ಥನೆಯನ್ನು ಹಾಡಿ ಕಾರ್ಯಕ್ರಮಕ್ಕೆ ಶುಭ ಕೋರಿದರು




ಸನ್ಮಾನ ಸ್ವೀಕರಿಸಿದ ಸಂಘ ಸಂಸ್ಥೆಗಳ ಪ್ರತಿನಿಧಿಗಳೊಡನೆ ಅಸೋಸಿಯೇಶನ್ನಿನ ಅಧ್ಯಕ್ಷರು ಹಾಗೂ ಕಾರ್ಯಕಾರಿ ಸಮಿತಿಯ ಸದಸ್ಯರು



ಅಸೋಸಿಯೇಶನ್ನಿನ ಮುಂಬೈ ಸದಸ್ಯರಿಂದ ಸಂಗೀತ ಕಾರ್ಯಕ್ರಮ




ಅಸೋಸಿಯೇಶನ್ನಿನ ಬೆಂಗಳೂರು ಸದಸ್ಯರಿಂದ ರಂಗಗೀತೆಗಳ ಕಾರ್ಯಕ್ರಮ









ಅಸೋಸಿಯೇಷನ್ನಿಗಾಗಿ ವಿಶೇಷ ಸೇವೆ ಸಲ್ಲಿಸಿದವರಿಗೆ ಸನ್ಮಾನ






ಅಸೋಸಿಯೇಷನ್ನಿಗಾಗಿ ವಿಶೇಷ ಸೇವೆ ಸಲ್ಲಿಸಿದವರಿಗೆ ಸನ್ಮಾನ








ಸಂಜೆಯ ಕಾರ್ಯಕ್ರಮದ ಉದ್ಘಾಟನೆ ಮಾಡುತ್ತಿರುವ ಮುಂಬೈ ವಿಶ್ವವಿದ್ಯಾಲಯದ ಉಪಕುಲಪತಿ ಪ್ರೊ. ರವೀಂದ್ರ ಕುಲಕರ್ಣಿ, ಮುಂಬೈಯ ತಾಂತ್ರಿಕ ವಿಜ್ಞಾನ ಸಂಸ್ಥೆಯ ಉಪನಿರ್ದೇಶಕರಾದ ಪ್ರೊ. ರವೀಂದ್ರ ಗುಡಿ, ಪ್ರೊ. ಮಾಧವ ರಾಜವಾಡೆ, ಮುಂಬೈ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ಜಿ. ಎನ್. ಉಪಾಧ್ಯ, ಅಸೋಸಿಯೇಶನ್ನಿನ ಅಧ್ಯಕ್ಷರು ಕೆ. ಕಮಲಾ ಹಾಗೂ ಗೌ. ಕಾರ್ಯದರ್ಶಿ ಡಾ. ಗಣಪತಿ ಶಂಕರಲಿಂಗ



ಕುಮಾರಿ ಅನಿಕಾ ಹಾಗೂ ಆರೋಹಿ ಪ್ರಾರ್ಥನೆ ಸಲ್ಲಿಸುತ್ತಿದ್ದಾರೆ.

ಗೌ. ಕಾರ್ಯದರ್ಶಿ ಡಾ. ಗಣಪತಿ ಶಂಕರಲಿಂಗ ಮತ್ತು ಸಹಕಾರ್ಯದರ್ಶಿ ನಾರಾಯಣ ನವಿಲೇಕರ್ ಅವರು ಕಲಾವಿದ ಜಯ ಸಾಲ್ಯಾನ್ ಅವರನ್ನು ಸನ್ಮಾನಿಸುತ್ತಿದ್ದಾರೆ.






ಹಾಸ್ಯ ಕಲಾವಿದ ರಾಘವೇಂದ್ರ ಆಚಾರ್ಯ ಅವರಿಂದ ಕಾರ್ಯಕ್ರಮ



ಶ್ರೀಮತಿ ನಳಿನಾ ಪ್ರಸಾದ್ ಅವರು ಕಾರ್ಯಕ್ರಮವನ್ನು ನಿರೂಪಿಸುತ್ತಿರುವುದು




"ಭಾರತೀಯ ಜ್ಞಾನ ಪರಂಪರೆ" ಪುಸ್ತಕ ಬಿಡುಗಡೆಯ ಸಂದರ್ಭ




"ಶತಮಾನೋತ್ಸವದ ಸ್ಮರಣಿಕೆ" ಯ ಬಿಡುಗಡೆ

ರಾಜ್ಯಪ್ರಶಸ್ತಿ ವಿಜೇತೆ ಕುಮಾರಿ ಸಾಧ್ವಿನಿ ಕೊಪ್ಪ ಅವರಿಂದ ಕನ್ನಡಗೀತೆಗಳ ಗಾಯನ ಕಾರ್ಯಕ್ರಮ





ನಿರೂಪಕಿಯರಾದ ಶ್ರೀಮತಿ ರೇಷ್ಮಾ ಶಂಕರಲಿಂಗ ಮತ್ತು ಶ್ರೀಮತಿ ಕಲಾ ಭಾಗ್ವತ್ ಅವರಿಗೆ ಸನ್ಮಾನ






## ಮುಂಬೈ ವಿಶ್ವವಿದ್ಯಾಲಯದ ಮಹತ್ವಾಕಾಂಕ್ಷೆಯ ಯೋಜನೆ – ಭಾರತೀಯ ಜ್ಞಾನ ಪರಂಪರೆ ಎಂಬ ಕೃತಿಯ ಕುರಿತು

ದೇಶದ ಮೊದಲ ವಿಶ್ವವಿದ್ಯಾಲಯ ಎಂಬ ಖ್ಯಾತಿಗೆ ಭಾಜನವಾಗಿರುವ ಮುಂಬೈ ವಿಶ್ವವಿದ್ಯಾಲಯಕ್ಕೆ ಈಗ 170ರ ಸಂಭ್ರಮ. ಈ ಐತಿಹಾಸಿಕ ಕ್ಷಣದ ನೆನಪಿಗಾಗಿ ವಿಶ್ವವಿದ್ಯಾಲಯ ಭಾರತದ 22 ಭಾಷೆಗಳಲ್ಲಿ ಭಾರತೀಯ ಜ್ಞಾನ ಪರಂಪರೆ ಕೃತಿಯನ್ನು ಪ್ರಕಟಿಸಲು ಮುಂದಾಗಿದ್ದು ಈಗಾಗಲೇ ಇಂಗ್ಲೀಷ್, ಮರಾಠಿ ಆವೃತ್ತಿಗಳು ಬಿಡುಗಡೆಯಾಗಿವೆ. ಇತ್ತೀಚೆಗೆ ಮೈಸೂರು ಅಸೋಸಿಯೇಷನ್ ಶತಮಾನೋತ್ಸವದ ಅಂಗವಾಗಿ ಕನ್ನಡ ಆವೃತ್ತಿಯನ್ನು ಕುಲಪತಿ ಪ್ರೊ. ರವೀಂದ್ರ ಕುಲಕರ್ಣಿ ಅವರು ಮೈಸೂರು ಅಸೋಸಿಯೇಷನ್ ನಲ್ಲಿ ಬಿಡುಗಡೆಗೊಳಿಸಿದರು. ಇದೀಗ ಇತರ ಭಾರತೀಯ ಭಾಷೆಗಳಲ್ಲಿ ಈ ಭಾರತೀಯ ಜ್ಞಾನ ಪರಂಪರೆ ಬೆಳಕು ಕಾಣಲಿದೆ ಎಂಬುದಾಗಿ ಮುಂಬೈ ವಿಶ್ವವಿದ್ಯಾಲಯದ ಪ್ರಕಟಣೆ ತಿಳಿಸಿದೆ.

ಮುಂಬೈ ವಿಶ್ವವಿದ್ಯಾಲಯ ಭಾಷಾ ಸಾಮರಸ್ಯವನ್ನು ಎತ್ತಿ ಹಿಡಿಯುವ ದೃಷ್ಟಿಯಿಂದ ಭಾರತದ ಹಿರಿಮೆಯನ್ನು ಪರಿಚಯಿಸುವ ನಿಟ್ಟಿನಲ್ಲಿ ಈ ಒಂದು ಮಾಲಿಕೆಯನ್ನು ಆರಂಭ ಮಾಡಿದೆ. ಇದನ್ನ ಆಯಾ ಭಾಷೆಯ ಓದುಗರು ಸಂಘ ಸಂಸ್ಥೆಗಳು ಕೊಂಡು, ಖರೀದಿಸಿ ಸಹಕರಿಸಬೇಕು. ಭಾರತೀಯ ಜ್ಞಾನಪರಂಪರೆ ವಿವಿಯಲ್ಲಿ ಮಾರಾಟಕ್ಕೆ ಲಭ್ಯವಿದೆ ಎಂಬುದಾಗಿ ವಿಶ್ವವಿದ್ಯಾಲಯ ತಿಳಿಸಿದೆ.

ಕನ್ನಡ ಆವೃತ್ತಿಯ ಹಿರಿಮೆ

ಭಾರತೀಯ ಜ್ಞಾನ ಪರಂಪರೆ ಇದು ಮುಂಬೈ ವಿಶ್ವವಿದ್ಯಾಲಯದ ವಿನೂತನ ಕೃತಿ. ಈ ಮಹತ್ವದ ಆಕರ ಗ್ರಂಥವನ್ನು ಡಾ. ಮಾಧವ ರಾಜವಾಡೆ ಅವರು ಸಂಪಾದಿಸಿಕೊಟ್ಟಿದ್ದಾರೆ. ಇದರ ಕನ್ನಡ ಆವೃತ್ತಿಯನ್ನು ಡಾ.ಜಿ. ಎನ್.ಉಪಾಧ್ಯ ಅವರು ಸಂಕಲನಗೊಳಿಸಿಕೊಟ್ಟಿದ್ದಾರೆ. ಭಾರತದ ಭವ್ಯ ಪ್ರಾಚೀನ ಜ್ಞಾನ ಪರಂಪರೆಯ ದರ್ಶನ ಈ ಕೃತಿಯಲ್ಲಿ ಮಡುಗಟ್ಟಿದೆ.

ವಿವಿಧತೆಯಲ್ಲಿ ಏಕತೆ ನಮ್ಮ ರಾಷ್ಟ್ರದ ವೈಶಿಷ್ಟ್ಯ.ನಮ್ಮ ಹಿರಿಯರು ಈ ವಿಶಾಲ ಭೂಖಂಡವನ್ನು ಭರತವರ್ಷ ಎಂದು ಕರೆದರು. ಪ್ರಾಚೀನ ಭಾರತವು ಜೀವನದ ಹಲವಾರು ಕ್ಷೇತ್ರಗಳಲ್ಲಿ ಮಹತ್ವದ ಸಾಧನೆಯನ್ನು ಮಾಡಿತ್ತು.ಪ್ರಾಚೀನ ಭಾರತದ ಸಾಂಸ್ಕೃತಿಕ ಇತಿಹಾಸವನ್ನು ಸರಿಯಾಗಿ ಅರ್ಥ ಮಾಡಿಕೊಳ್ಳುವುದು ನಮ್ಮೆಲ್ಲರ ಜವಾಬ್ದಾರಿಯೂ ಅಹುದು.ಗತಕಾಲದ ಇತಿಹಾಸವನ್ನು ಅರಿತು ದೇಶದ ಪ್ರಗತಿಯ ವೇಗವನ್ನು ಹೆಚ್ಚಿಸಲು ಪ್ರಾಚೀನ ಭಾರತದ ಸಾಂಸ್ಕೃತಿಕ ಇತಿಹಾಸದ ಅಧ್ಯಯನವು ಪ್ರಸ್ತುತ ಮತ್ತು ಅತ್ಯಗತ್ಯ. ನಮ್ಮ ಪೂರ್ವಜರು ಯಾವ ರೀತಿಯಲ್ಲಿ ಸಂಸ್ಕೃತಿಯನ್ನು ರೂಪಿಸಿದರು,ವ್ಯವಸಾಯವನ್ನು ಅಭಿವೃದ್ಧಿ ಪಡಿಸಿದರು,ಸುತ್ತಲಿನ ಪರಿಸರ ಪ್ರಕೃತಿ ಸಂಪತ್ತನ್ನು ಬಳಸಿಕೊಂಡು ವಿವಿಧ ಕಸುಬುಗಳನ್ನು ಮಾಡಿ ಹೊಸ ನಾಗರೀಕತೆಯ ಕಡೆಗೆ ಮುಖ ಮಾಡಿದರು ಎಂಬುದನ್ನು ತಿಳಿದುಕೊಳ್ಳಲು ಜ್ಞಾನ ಪರಂಪರೆಯ ಇತಿಹಾಸದ ಅಧ್ಯಯನ ಅತಿ ಅಗತ್ಯ.

ಪ್ರಾಚೀನ ಕಾಲದಿಂದಲೂ ಭಾರತ ಅನೇಕತೆಯಲ್ಲಿ ಏಕತೆಯನ್ನು ಕಾಪಾಡಿಕೊಂಡು ಬಂದಿತ್ತು ಎಂಬುದನ್ನು ನಾವು ಸಾಂಸ್ಕೃತಿಕ ಅಧ್ಯಯನದಿಂದ ತಿಳಿದುಕೊಳ್ಳಲು ಸಾಧ್ಯ.

ಈ ಕೃತಿ ಭಾರತೀಯ ಜ್ಞಾನ ಪರಂಪರೆಯ ವಿರಾಟ್ ಸ್ವರೂಪವನ್ನು ಬಿಂಬಿಸುವ ಒಂದು ಘನ ಪ್ರಯತ್ನವೂ ಆಗಿದೆ. ಇದು ನಮ್ಮ ದೇಸಿ ಬೇರುಗಳ ಗುರುತಿಸುವಿಕೆಯ ಮಹತ್ವದ ಜರೂರಿನ ಉಪಕ್ರಮವೂ ಹೌದು.ಅನ್ಯಾನ್ಯ ಕಾರಣ ಗಳಿಂದ ನೆಮ್ಮೆಡೆಗೆ ದ್ರುತಗತಿಯಲ್ಲಿ ಧಾವಿಸಿ ಬರುತ್ತಿರುವ ಜಾಗತೀಕರಣಕ್ಕೆ ಮುಖಾಮುಖಿಯಾಗಿ ನಮ್ಮ ದೇಶೀಯ ಜ್ಞಾನ ಪರಂಪರೆಯನ್ನು ಮರುಶೋಧಿಸಿ ಆ ಮೂಲಕ ಕುಸಿಯುತ್ತಿರುವ ನಮ್ಮ ಬೇರುಗಳನ್ನು ಬಲಗೊಳಿಸಿಕೊಳ್ಳಬೇಕಾಗಿದೆ.

ಸ್ಥಳೀಯ ಆಯುರ್ವೇದ, ಭಾಷೆ, ಸಾಹಿತ್ಯ, ವ್ಯಾಕರಣ, ಛಂದಸ್ಸು, ಚರಿತ್ರೆ, ಕೃಷಿ, ವೈದ್ಯ, ಪರಿಸರ ಮುಂತಾದ ಅಧ್ಯಯನ ವಿಷಯಗಳನ್ನು ಹೊಸ ಆಲೋಚನೆಯ ನೆಲೆಯಲ್ಲಿ ವಿಶ್ಲೇಷಿಸಬೇಕಾಗಿದೆ ಎಂಬ ಆಶಯ ಈ ಕೃತಿಯ ವಿವಿಧ ಲೇಖನಗಳಲ್ಲಿ ಢಾಳಾಗಿ ಕಾಣಸಿಗುತ್ತದೆ.

ಆಧುನಿಕ ವಿಜ್ಞಾನ, ತಂತ್ರಜ್ಞಾನವೇ 'ಜ್ಞಾನ' ಉಳಿದದ್ದೆಲ್ಲ ಸುಳ್ಳು ಎಂದು ರೂಪಿಸಿರುವ ಇಂದಿನ ಆಲೋಚನೆಗೆ ಪ್ರತಿಯಾಗಿ ಈ ಜ್ಞಾನ ಶಾಖೆಗಳಲ್ಲಿ ಹುದುಗಿರುವ ದೇಶಿ ಪರಂಪರೆಯ ಜ್ಞಾನದ ಹುಡುಕಾಟ ನಡೆಯಬೇಕಾದುದು ವರ್ತಮಾನದ ತುರ್ತು ಸಹ ಹೌದು .ಅಂತಹ ಪ್ರಯತ್ನಗಳಿಗೆ ಬೇಕಾದ ಮಾರ್ಗದರ್ಶಕ ಸೂತ್ರಗಳ ಹಾಗೂ ಆಕರ ಪರಿಕರಗಳ ನಿರ್ಮಾಣದ ನೆಲೆ ತುಂಬ ಮುಖ್ಯವಾಗಿದೆ.ಈ ಎಲ್ಲ ಆಶಯಗಳು ಈಡೇರಲು ಈ ಪತ್ಯ ಕೈದೀವಿಗೆಯಂತಿದೆ.

ಜಗತ್ತಿನ ಪ್ರಾಚೀನ ರಾಷ್ಟ್ರಗಳಲ್ಲಿ ಭಾರತವೂ ಒಂದು. ನಮ್ಮದು ಬಹುಭಾಷೆ ಬಹುಸಂಸ್ಕೃತಿಗಳ ನಾಡು. ಬಹುತ್ವ ನಮ್ಮ ನಾಡಿನ ಜೀವಾಳ. ಸರ್ವ ಭಾಷಾಮಯೀ ಶಾರದಾ ಎಂಬ ನಿಲುವು ನಮ್ಮ ಹಿರಿಯರಾದಾಗಿತ್ತು. ಭಾರತದ ಪ್ರಾಚೀನ ಭಾಷೆಗಳಾದ ಸಂಸ್ಕೃತ, ಪ್ರಾಕೃತ,ಪಾಲಿ ಮೊದಲಾದ ಭಾಷೆಯ ಕೃತಿಗಳಲ್ಲಿ ಸಮೃದ್ಧ ಜ್ಞಾನಧಾರೆ ಹರಿದು ಬಂದಿದೆ.ಜೊತೆಗೆ ಇತರ ಭಾಷೆಗಳಲ್ಲೂ ಪರಂಪರೆಯ ಜ್ಞಾನಕ್ಕೆ ಕೊರತೆ ಇಲ್ಲ.ಅವನ್ನೆಲ್ಲ ಸಂಕಲಿಸಿ ಈ ಕೃತಿಯಲ್ಲಿ ಕನ್ನಡ ಓದುಗರಿಗೆ ಕೊಡಲಾಗಿದೆ. ಪ್ರಾಚೀನ ಭಾರತದ ಅಭಿವೃದ್ಧಿಗೆ ಕರ್ನಾಟಕ ಕೊಟ್ಟ ಜ್ಞಾನ ಮೀಮಾಂಸೆಯ ಚಿಂತನೆ ಸಾಂಪ್ರತ ಗ್ರಂಥದಲ್ಲಿ ನೆಲೆ ಪಡೆದಿದೆ.

ಭಾರತೀಯ ಜ್ಞಾನ ಪರಂಪರೆ (ಐಕೆಎಸ್) ಎಂಬುದು ಬರೆ ಪುಸ್ತಕವಲ್ಲ. ಅದು ಭಾರತದ ಆಳವಾದ ಬೌದ್ಧಿಕ ವೈಜ್ಞಾನಿಕ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಪ್ರತಿನಿಧಿಸುತ್ತದೆ. ಡಿವಿಜಿ ಅವರು ಹೇಳುವಂತೆ ಹಳೆ ಬೇರು ಹೊಸ ಚಿಗುರುಗಳ ಸಶಕ್ತ ಸಮನ್ವಯ ಅನುಸಂಧಾನ ಇಲ್ಲಿ ನಡೆದಿದೆ. ಇದೊಂದು ಆಂದೋಲನದ ಮಾದರಿಯಲ್ಲಿ ರಾಷ್ಟ್ರೀಯ ಶಿಕ್ಷಣ ಯೋಜನೆ –2020 ರ ಮೂಲಕ ನಾಳಿನ ಹೊಸ ತಲೆಮಾರಿಗೆ ಪರಿಚಯಿಸುವ ಭಗೀರಥ ಪ್ರಯತ್ನವೂ ನಡೆದಿದೆ. ವಸಾಹತುಶಾಹಿ ಆಡಳಿತದಿಂದ ಭಾರತದ ಭವ್ಯ ಸಂಸ್ಕೃತಿ ವಿಸ್ಮೃತಿಗೆ ಸಂದಿತು. ಭಾರತೀಯರಾದ ನಾವು ಎಂಥ ಭವ್ಯ ಸಂಸ್ಕೃತಿಯ ವಾರಸುದಾರರು ಎಂಬುದನ್ನು ಭಾರತೀಯ ಜ್ಞಾನ ಪರಂಪರೆ ಕೃತಿಯು ಅನಾವರಣಗೊಳಿಸಿದೆ. ಇದೊಂದು ಬಗೆಯ ಸಾಂಸ್ಕೃತಿಕ ಪುನರ್ ನಿರ್ಮಾಣವೂ ಹೌದು. ಮುಂಬೈ ವಿಶ್ವವಿದ್ಯಾಲಯದ ಕುಲಪತಿಗಳ ದೂರ ದೃಷ್ಟಿಯಿಂದ ದೇಶದ ಎಲ್ಲ ಪ್ರಮುಖ ಭಾಷೆಗಳಲ್ಲಿ ಈ ಭಾರತೀಯ ಜ್ಞಾನ ಪರಂಪರೆ ಗ್ರಂಥ ರೂಪದಲ್ಲಿ ಪ್ರಕಟವಾಗುತ್ತಿರುವುದು ಶತಮಾನದ ತುರ್ತು ಸಹ ಆಗಿದೆ. ಈ ಮೂಲಕ ಕಾಶ್ಮೀರದಿಂದ ಕನ್ಯಾಕುಮಾರಿಯ ತನಕ ಒಂದು ಬಗೆಯ ಭಾಷಾ ಸಾಮರಸ್ಯ, ಭಾಷಾ ಬಾಂಧವ್ಯವನ್ನು, ರಾಷ್ಟ್ರೀಯ ಏಕತೆಯನ್ನು ಎತ್ತಿ ಹಿಡಿಯಲು ಸಾಧ್ಯ. ನಮ್ಮ ನಿನ್ನೆ ಇಂದು ನಾಳೆಗಳ ಅನುಸಂಧಾನ ಈ ಕೃತಿಯ ಮೂಲಕ ಸಾಧ್ಯವಿದೆ. ಇದೊಂದು ಬರೇ ಅನುವಾದ ಕೃತಿಯಲ್ಲ . ಮೂಲ ಅಸ್ಥಿ ಪಂಜರಕ್ಕೆ ಕನ್ನಡದ ಕರ್ನಾಟಕದ ಉಸಿರು ತುಂಬಿ ಬಣ್ಣ ಸೊಗಡು ಸೊಬಗನ್ನು ನೀಡಲಾಗಿದೆ.ಇದು ಮುಂಬೈ ವಿಶ್ವವಿದ್ಯಾಲಯದ ಹೆಮ್ಮೆಯ

ಕೊಡುಗೆ.ಇಂಗ್ಲೀಷ ಹಾಗೂ ಮರಾಠಿಯಲ್ಲಿ ಈಗಾಗಲೇ ಬೆಳಕು ಕಂಡು ಜನಪ್ರಿಯವಾಗಿರುವ ಈ ಕೃತಿಯನ್ನು ಈಗ ಕನ್ನಡ ಸಾರಸ್ವತ ಜಗತ್ತಿಗೆ ಪರಿಚಯಿಸಲಾಗಿದೆ.

ಇದು ಎಲ್ಲರಿಗೂ ಉಪಯುಕ್ತವಾದ ಅಧ್ಯಯನಪೂರ್ಣ ಗ್ರಂಥವೂ ಹೌದು. ಈ ಮಹತ್ವದ ಕೃತಿರಚನೆಗೆ ಮಾರ್ಗದರ್ಶನವನ್ನು ಮಾಡಿದ ಮುಂಬೈ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಾದ ಪ್ರೊ. ರವೀಂದ್ರ ಕುಲಕರ್ಣಿ, ಈ ಕೃತಿಯ ಮುಖ್ಯ ಸಂಪಾದಕರಾದ ಡಾ. ಎಂ. ಆರ್.ರಾಜವಾಡೆ. ಸಂಪಾದಕರಾದ ಡಾ ಪ್ರಕಾಶ್ ಮಸರಾಮ್ ಹಾಗೂ ಇದನ್ನು ಕನ್ನಡಕ್ಕೆ ತರುವಲ್ಲಿ ಸಹಕರಿಸಿದ ವಿಭಾಗದ ಮಿತ್ರರಾದ ಡಾ.ಪೂರ್ಣಿಮಾ ಶೆಟ್ಟಿ, ಕಲಾ ಭಾಗ್ವತ್, ಸವಿತಾ ಅರುಣ್ ಶೆಟ್ಟಿ ಅವರು ಸಹಕರಿಸಿದ್ದಾರೆ. .ವಿಷಯತಜ್ಞರಾಗಿ ಈ ಕೃತಿಯನ್ನು ಪರಿಶೀಲಿಸಿಕೊಟ್ಟ ವಿಭಾಗದ ಸಂದರ್ಶಕ ಪ್ರಾಧ್ಯಾಪಕರಾದ ಡಾ. ಉಮಾ ರಾಮರಾವ್ ಅವರು ಕೆಲಸ ಮಾಡಿದ್ದಾರೆ . ಈ ಕೃತಿಯ ಪ್ರಾಯೋಜಕತ್ವವನ್ನು ಶತಮಾನೋತ್ಸವರ ಸಂಭ್ರಮದಲ್ಲಿರುವ ಮೈಸೂರು ಅಸೋಸಿಯೇಷನ್, ಮುಂಬೈ ವಹಿಸಿಕೊಂಡಿರುವುದು ಹೆಮ್ಮೆಯ ಸಂಗತಿ. ಇದಕ್ಕಾಗಿ ಅಸೋಸಿಯೇಷನ್ನಿನ ಗೌರವ ಕಾರ್ಯದರ್ಶಿಗಳಾದ ಡಾ. ಗಣಪತಿ ಶಂಕರಲಿಂಗ ಹಾಗೂ ಇತರ ಎಲ್ಲ ಮಿತ್ರರಿಗೆ ಡಾ. ಉಪಾಧ್ಯ ಅವರು ಧನ್ಯವಾದ ಸಲ್ಲಿಸಿದ್ದಾರೆ. ಮುಂಬೈ ವಿಶ್ವವಿದ್ಯಾಲಯದಲ್ಲಿ ಕನ್ನಡಸ್ಥಾಪನೆಯಾಗಿ 125ವರ್ಷಗಳು ತುಂಬಿದ ಶುಭ ಸಂದರ್ಭದಲ್ಲಿ ಕನ್ನಡ ಕೃತಿ ಬೆಳಕು ಕಾಣುತ್ತಿರುವುದು ಅತ್ಯಂತ ಸಂತೋಷದ ಸಂಗತಿಯಾಗಿದೆ.

# ಶತಮಾನೋತ್ಸವದ ಅಂಗವಾಗಿ  ಕವಿಗೋಷ್ಠಿ ಹಾಗೂ ಸಾಹಿತ್ಯ ಸ್ಪರ್ಧೆಗಳ ಬಹುಮಾನ ವಿತರಣೆ

ಮೈಸೂರು ಅಸೋಸಿಯೇಷನ್ ಮುಂಬೈ ಇದರ ಶತಮಾನೋತ್ಸವದ ಅಂಗವಾಗಿ ಹಮ್ಮಿಕೊಂಡಿದ್ದ ಭವ್ಯ ಕವಿಗೋಷ್ಠಿ ಮತ್ತು ಜಾಗತಿಕ ಮಟ್ಟದ ಸಾಹಿತ್ಯ ಸ್ಪರ್ಧೆಗಳ ಬಹುಮಾನ ವಿತರಣಾ ಸಮಾರಂಭವು ಮಾರ್ಚ್ 28ರಂದು ಮಾಟುಂಗದ ಅಸೋಸಿಯೇಷನ್ ಸಭಾಗೃಹದಲ್ಲಿ ಅತ್ಯಂತ ಸಂಭ್ರಮದಿಂದ ಜರುಗಿತು.



**ಕವಿಗೋಷ್ಠಿಯಲ್ಲಿ ಭಾಗವಹಿಸಿದ ಕವಿಗಳ ತಂಡ**

ಕವಿಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದ ಹಾಸನದ ಖ್ಯಾತ ಕವಯತ್ರಿ ಹಾಗೂ ನಾಟಕ ಅಕಾಡೆಮಿ ಸದಸ್ಯೆ ಮಮತಾ ಅರಸೀಕೆರೆ ಅವರು ಮಾತನಾಡಿ, "ಪ್ರಸ್ತುತ ಯುದ್ಧ ಮತ್ತು ಅಶಾಂತಿಯ ಕಾಲದಲ್ಲಿ ಕವಿಗಳ ಮಾನವೀಯ ಕಳಕಳಿ ಪ್ರಶಂಸನೀಯ. ಇಲ್ಲಿ ವಾಚಿಸಲಾದ ಕವಿತೆಗಳ ಒಳಧ್ವನಿ ಶಾಂತಿ, ಸಮನ್ವಯ ಮತ್ತು ಜೀವನ ಪ್ರೀತಿಯಿಂದ ಕೂಡಿದೆ," ಎಂದು ಅಭಿಪ್ರಾಯಪಟ್ಟರು. ಇಂತಹ ಸಾಹಿತ್ಯಿಕ ಕಾರ್ಯಕ್ರಮ ಆಯೋಜಿಸಿದ ಅಸೋಸಿಯೇಷನ್‌ನ ಕಾರ್ಯವೈಖರಿಯನ್ನು ಅವರು ಶ್ಲಾಘಿಸಿದರು.



**ಕಾರ್ಯಕ್ರಮದ ಉದ್ಘಾಟನೆ: ಶ್ರೀ. ಶರದ್ ಸೌಕೂರು, ಡಾ. ಭರತ್ ಕುಮಾರ್ ಪೊಲಿಪು, ಹಾಗೂ ಅಸೋಸಿಯೇಷನ್ನಿನ ಉಪಾಧ್ಯಕ್ಷರಾದ ಶ್ರೀ. ಉಮೇಶ್ ಮಾಸ್ಕೇರಿಯವರು**

ಕವಿ ಹಾಗೂ ರಂಗಕರ್ಮಿ ಗೋಪಾಲ ತ್ರಾಸಿ ಅವರ ಅಚ್ಚುಕಟ್ಟಾದ ಸಂಚಾಲಕತ್ವದಲ್ಲಿ ನಡೆದ ಗೋಷ್ಠಿಯಲ್ಲಿ ನಾಡಿನ ವಿವಿಧೆಡೆಯಿಂದ ಬಂದ ಕವಿಗಳು ಕಾವ್ಯ ವಾಚನಗೈದರು. ಮೈಸೂರು ಅಸೋಸಿಯೇಶನ್ನಿನ ಸದಸ್ಯರಾದ ಶ್ರೀಮತಿ ರಾಜೇಶ್ವರಿ ಗೋಪಾಲಕೃಷ್ಣ, ಅವರ ಜೀವನದ ವಿವಿಧ ಘಟ್ಟಗಳ ಅನುಭವವನ್ನು ಕವನ ರೂಪದಲ್ಲಿ ನಿರೂಪಿಸಿದರು. ವಿಲ್ಸನ್ ಕಟೀಲು, ಕೊಟ್ರೇಶ್ ಕೊಟ್ಟೂರು ಹಾಗೂ ಶ್ರೀದೇವಿ ಕೆರೆಮನೆ ಅವರು ಸಮಕಾಲೀನ ಸ್ಥಿತಿಗೆ ಕನ್ನಡಿ ಹಿಡಿಯುವ ಧ್ವನಿಪೂರ್ಣ ಕವಿತೆಗಳನ್ನು ವಾಚಿಸಿದರು. ಮುಂಬೈನ ಸೃಜನಶೀಲ ಕವಯತ್ರಿಯರಾದ ಡಾ. ಜಿ.ಪಿ. ಕುಸುಮಾ ಮತ್ತು ಅನಿತಾ ತಾಕೋಡೆ ಅವರ ಅರ್ಥಪೂರ್ಣ ಕವನಗಳು ಗಮನ ಸೆಳೆದವು. ಯುವ ಪ್ರತಿಭೆಗಳಾದ  ರಜನಿ ತೋಳಾರ್ ಮತ್ತು ಅಶ್ವಿತಾ ಶೆಟ್ಟಿ ಅವರು ಭಾವಪೂರ್ಣ ವಾಚನದ ಮೂಲಕ ಮೆಚ್ಚುಗೆ ಗಳಿಸಿದರು.

ಶತಮಾನೋತ್ಸವದ ಪ್ರಯುಕ್ತ ಜಾಗತಿಕ ಮಟ್ಟದಲ್ಲಿ ಆಯೋಜಿಸಲಾಗಿದ್ದ ಶಿಶುಕವನ, ನಾಟಕ ಹಾಗೂ ಸಣ್ಣ ಕಥೆಗಳ ಸ್ಪರ್ಧೆಯ ವಿಜೇತರಿಗೆ ಈ ಸಂದರ್ಭದಲ್ಲಿ ಗೌರವಪೂರ್ವಕವಾಗಿ ಬಹುಮಾನಗಳನ್ನು ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ತೀರ್ಪುಗಾರರಾದ ಶ್ರೀ ಶರದ್ ಸೌಕೂರು ಹಾಗೂ



**"ನೇಸರು ತಿಂಗಳೋಲೆ" ವಿಶೇಷ ಸಂಚಿಕೆ ಬಿಡುಗಡೆ**



**ಶಿಶುಕವನ ಸ್ಪರ್ಧೆ – ಪ್ರಥಮ ಬಹುಮಾನ – ತಾ. ಶ್ರೀ. ಗುರುರಾಜ್**



**ಶಿಶುಕವನ ಸ್ಪರ್ಧೆ – ದ್ವಿತೀಯ ಬಹುಮಾನ – ಡಾ. ಟಿ. ಎಚ್. ಲವಕುಮಾರ್**



**ಶಿಶುಕವನ ಸ್ಪರ್ಧೆ – ತೃತೀಯ ಬಹುಮಾನ – ರಮ್ಯಾ ಕೆ. ಜಿ.**



**ಶಿಶುಕವನ ಸ್ಪರ್ಧೆ – ಮೆಚ್ಚುಗೆಯ ಬಹುಮಾನ – ಮೀನಾಕ್ಷಿ ಸುರೇಶ್ ಭಾಂಗಿ**

ಶ್ರೀ ಭರತ್ ಕುಮಾರ್ ಪೊಲಿಪು ಅವರು ಉಪಸ್ಥಿತರಿದ್ದು, ವಿಜೇತರನ್ನು ಅಭಿನಂದಿಸಿದರು. ಈ ವೇಳೆ ಬಹುಮಾನ ವಿಜೇತರು ಹಾಗೂ ತೀರ್ಪುಗಾರರು ವೇದಿಕೆಯಲ್ಲಿ ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು. ತೀರ್ಪುಗಾರರಾಗಿ ಶ್ರೀ ಶರದ್ ಸೌಕೂರು ಮತ್ತು ಡಾ. ಭರತ್ ಕುಮಾರ್ ಪೊಲಿಪು ರವರು ತಮ್ಮ ಆಯ್ಕೆಗೆ ಮಾನದಂಡವಾಗಿ ನೈಜ ಸ್ಥಿತಿಯ ಅನುಭವವನ್ನು ಗುರುತಿಸಿದ್ದಾಗಿ ತಿಳಿಸಿದರು.

**'ನೇಸರು ತಿಂಗಳೋಲೆ' ವಿಶೇಷ ಸಂಚಿಕೆ ಬಿಡುಗಡೆ:** ಇದೇ ಸುಸಂದರ್ಭದಲ್ಲಿ ಅಸೋಸಿಯೇಷನ್‌ನ ಹೆಮ್ಮೆಯ ಮಾಸಪತ್ರಿಕೆ 'ನೇಸರು ತಿಂಗಳೋಲೆ'ಯ ವಿಶೇಷ ಸಂಚಿಕೆಯನ್ನು ಬಿಡುಗಡೆ ಮಾಡಲಾಯಿತು. ಈ ಸಂಚಿಕೆಯ ವಿಶೇಷತೆಯೆಂದರೆ, ಇದು ಜಾಗತಿಕ ಮಟ್ಟದ ಸ್ಪರ್ಧೆಯಲ್ಲಿ ಬಹುಮಾನ ವಿಜೇತರು ರಚಿಸಿದ ಅತ್ಯುತ್ತಮ ಶಿಶುಕವನಗಳು, ಸಣ್ಣ ಕಥೆಗಳು ಹಾಗೂ ನಾಟಕಗಳನ್ನು ಒಳಗೊಂಡಿದೆ. ಅಸೋಸಿಯೇಷನ್‌ನ ಉಪಾಧ್ಯಕ್ಷ ಉಮೇಶ ಮಾಸ್ಕೇರಿಯವರು ಸ್ವಾಗತಿಸಿ ಪ್ರಾಸ್ತಾವಿಕ ನುಡಿಗಳನ್ನಾಡಿದರು.



**ಶಿಶುಕವನ ಸ್ಪರ್ಧೆ – ಮೆಚ್ಚುಗೆಯ ಬಹುಮಾನ – ಸತ್ಯವತಿ ಭಟ್, ಕೊಳಚಪ್ಪು**

ಗೌರವಕಾರ್ಯದರ್ಶಿ ಡಾ. ಗಣಪತಿ ಶಂಕರಲಿಂಗ ಅವರು ಕವಿಗೋಷ್ಠಿಯ ಯಶಸ್ಸಿಗೆ ಕಾರಣರಾದ ಎಲ್ಲರಿಗೂ ಕೃತಜ್ಞತೆ ಸಲ್ಲಿಸಿದರು. ಶ್ರೀ. ನಾರಾಯಣ ನವಿಲೇಕರ್ ಅವರು ವಂದಿಸಿದರು.



ನೇಸರು ಸಣ್ಣ ಕಥಾ ಸ್ಪರ್ಧೆ – ಪ್ರಥಮ ಬಹುಮಾನ – ವಿವೇಕ ಬೆಟ್ಕುಳಿ



ನೇಸರು ಸಣ್ಣ ಕಥಾ ಸ್ಪರ್ಧೆ – ದ್ವಿತೀಯ ಬಹುಮಾನ – ಜಯರಾಮಾಚಾರಿ



ನೇಸರು ಸಣ್ಣ ಕಥಾ ಸ್ಪರ್ಧೆ – ತೃತೀಯ ಬಹುಮಾನ – ಮುನವ್ವರ್ ಜೋಗಿಬೆಟ್ಟು



ನೇಸರು ಸಣ್ಣ ಕಥಾ ಸ್ಪರ್ಧೆ – ಮೆಚ್ಚುಗೆಯ ಬಹುಮಾನ – ಭವ್ಯಾ ಪಿ. ಆರ್. ನಿಡ್ಪಳ್ಳಿ



ನೇಸರು ಸಣ್ಣ ಕಥಾ ಸ್ಪರ್ಧೆ – ಮೆಚ್ಚುಗೆಯ ಬಹುಮಾನ – ಅಶ್ವಿತಾ ಶೆಟ್ಟಿ




ನೇಸರು ನಾಟಕ ರಚನಾ ಸ್ಪರ್ಧೆ– ಪ್ರಥಮ ಬಹುಮಾನ – ವೆಂಕಟೇಶ ಪ್ರಸಾದ್ ರಾಮಕೃಷ್ಣ ಹೆಗಡೆ



ನೇಸರು ನಾಟಕ ರಚನಾ ಸ್ಪರ್ಧೆ– ದ್ವಿತೀಯ ಬಹುಮಾನ – ಪ್ರಹ್ಲಾದ ಜೋಶಿ



ನೇಸರು ನಾಟಕ ರಚನಾ ಸ್ಪರ್ಧೆ– ತೃತೀಯ ಬಹುಮಾನ – ಅಕ್ಷತಾ ರಾಜ್ ಪೆರ್ಲ









ಅಸೋಸಿಯೇಷನ್ ನಲ್ಲಿ ಶತಮಾನೋತ್ಸವದ ಪೂರ್ಣತೆಯ ನಂತರ ಏಪ್ರಿಲ್ 20 ರಂದು ಅಕ್ಷಯ ತೃತೀಯ ಸಂದರ್ಭದಲ್ಲಿ ಬೆಂಗಳೂರಿನಿಂದ ಬಂದ ನಮ್ಮ ಸದಸ್ಯರಾದ ಶ್ರೀ. ಎಚ್. ವಿ. ಜನಾರ್ಧನ್ ರಾವ್ ಮತ್ತು ಅವರ ಪತ್ನಿ ಶ್ರೀಮತಿ ಜ್ಯೋತಿ ಪೂಜಾ ಕಾರ್ಯವನ್ನು ನೇರವೇರಿಸಿಕೊಟ್ಟರು.

ಅದೇ ದಿನ ಅಸೋಸಿಯೇಷನ್ನಿನ ಕಾರ್ಯಕಾರಿ ಸಮಿತಿ ಒಟ್ಟುಗೂಡಿ ನೆರೆದ ಭಕ್ತಾದಿಗಳ ಸಮ್ಮುಖದಲ್ಲಿ ಅಸೋಸಿಯೇಷನ್ನಿನ ಸಿಬ್ಬಂದಿಗಳೆಲ್ಲರಿಗೂ ಗೌರವಪೂರ್ವಕವಾಗಿ ಸನ್ಮಾನಿಸಿ, ಅಸೋಸಿಯೇಷನ್ನಿನ ಏಳ್ಗೆಯಲ್ಲಿ ಅವರ ಕೊಡುಗೆಯನ್ನು ಶ್ಲಾಘಿಸಿದರು.

# ಮೈಸೂರು ಅಸೋಸಿಯೇಷನ್, ಮುಂಬಯಿ

# The Mysore Association, Bombay

### Centenary Year (1926 - 2026)

## ಮುಂಬರುವ ಕಾರ್ಯಕ್ರಮ

**ಸಾಹಿತಿಗಳೊಡನೆ ಸಂವಾದ**

**ಭಾಗವಹಿಸುವವರು ನೇಮಿಚಂದ್ರ, ಸಿ. ಜಿ. ಮಂಜುಳಾ**

**ಮತ್ತು**

**ಶ್ಯಾಮಲಾ ಮಾಧವ**

**ದಿನಾಂಕ 16.05.2026 ಶನಿವಾರ**

**ಸಂಜೆ 4.30 ರ ಸಮಯ**

**ಸ್ಥಳ: ಮೈಸೂರು ಅಸೋಸಿಯೇಷನ್ ತಳ ಸಭಾಂಗಣ,**

**ಭಾವು ದಾಜಿ ರಸ್ತೆ, ಮಾಟುಂಗಾ,**

**ಮುಂಬಯಿ 400019**

**ಎಲ್ಲರಿಗೂ ಸ್ನೇಹಕೂಟಕ್ಕೆ ಆದರದ ಸ್ವಾಗತ**

Edited by Dr. Jyothi Satish, Printed & Published by Hon. Secretary, The Mysore Association Bombay, Mumbai - 400019. Tel: 2403 7065
Email : mysoreassociation.mumbai@gmail.com Website: www.mysoreassociation.in Printed by Aarati Art Printers, Fort, Mumbai - 1 Mob.: 98201 60077